ಬೂಕನಕೆರೆ ವಿಜೇಂದ್ರ, ಮೈಸೂರು

ಶ್ರೀಮಂತರ ಮನೆಯಲ್ಲೇಕೆ ನಾಯಿಯನ್ನು ಪಕ್ಕದಲ್ಲೇ ಮಲಗಿಸಿಕೊಳ್ಳುತ್ತಾರೆ?



ಅಷ್ಟೊಂದು ಹಣ ಕೊಟ್ಟು ತಂದದ್ದನ್ನು ಯಾರಾದರೂ ಕದ್ದಾರೆಂಬ ಭಯ.

ರಮೇಶ್ ಜ ಬೊಂಗಾಳೆ, ಬೈಲಹೊಂಗಲ

ವೈದ್ಯರಿಗೂ, ವೃದ್ಧರಿಗೂ ವ್ಯತ್ಯಾಸವೇನು?

ಕೆಲವೆಡೆಗಳಲ್ಲಂತೂ ವೈದ್ಯ ವರ್ತಕ, ವೃದ್ಧ ಗಿರಾಕಿ.

ಗುರುರಾಜ್ ಬ. ಕನ್ನೂರ, ಬಸವನಬಾಗೇವಾಡಿ

ಮದುವೆ ಶ್ರೇಷ್ಠವೋ, ಸನ್ಯಾಸತ್ವ ಶ್ರೇಷ್ಠವೋ?

'ಶ್ರಮವಿಲ್ಲದೆ ಸರ್ವ ಸುಖ ಒದಗಿಸುವ ಆಶ್ರಮಗುರುವಿನ ಪಟ್ಟ' ಎಂದನಾ ಕಿಡಿಗೇಡಿ.

ಎಂ.ಎ. ಕುಮಾರ್, ಬೆಂಗಳೂರು

ಕಾಣದ ದೇವರನ್ನು ಕಾಣುವುದು ಹೇಗೆ?

ಭಕ್ತಿಯ ಕಾಂಟಾಕ್ಟ್ ಲೆನ್ಸ್ ಧರಿಸಿ.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ

ಹಾವು ಕಂಡರೆ ಸಾವು?



ನಿಜ. ಬಡಪಾಯಿ ಹಾವಿಗೆ!

ಕಾಳೀಹುಂಡಿ ಶಿವಕುಮಾರ್, ಮೈಸೂರು

ಈ ಅಂಕಣದಲ್ಲಿ ಬಹುಮಾನಿತ ಪ್ರಶ್ನೆ ಬಂದೊಡನೆ ನನ್ನವಳ ಮುಖ ಅರಳುವುದೇಕೆ?

'ಉತ್ತರ ಹೇಳುವುದಂತೂ ಕಲಿತಿಲ್ಲ, ಪ್ರಶ್ನಿಸುವುದನ್ನಾದರೂ ಕಲಿತಿರಲ್ಲ' ಎಂದು.

ಕುಣಿಗಲ್ ಜಯಣ್ಣ, ಕೆಂಚನಹಳ್ಳಿ

ಸಾಲಕ್ಕೆ ಕೊನೆ ಯಾವಾಗ?

ಶೂರಿಟಿ ಹಾಕುವವರು ಸಿಗದಾದಾಗ.

ಹೆಚ್.ವಿ. ಶ್ರೀಧರ್, ಬೆಂಗಳೂರು

ಬಹುತೇಕವಾಗಿ ಹಿಂದೂಗಳೇ ಹಿಂದಿನಿಂದಲೂ ಹಿಂದೂಗಳನ್ನು ವಿರೋಧಿಸಿ ಹಿಂದುಳಿಸಿದ್ದಾರಲ್ಲಾ?

ಅವರು ತಮ್ಮತಮ್ಮಲ್ಲೇ ವಿಭಾಗ ಸೃಷ್ಟಿಸಿಕೊಂಡು ಪರಸ್ಪರ ದ್ವೇಷಿಸುವ ಬುದ್ಧೂಗಳಾದುದೇ ಕಾರಣ.

ಎಂ.ಸಿ. ಧನ್ಯತಾ, ಬೆಂಗಳೂರು

ಬಲಿಗೂ, ತಬ್ಬಲಿಗೂ ಏನು ವ್ಯತ್ಯಾಸ?

'ಬಲಿ' ಎನ್ನುವುದು ಎಳಸುಗಳಿಗೆ ಹೇಳುವ ಮಾತು; 'ತಬ್ಬಲಿ' ಎನ್ನುವುದು ಪ್ರೇಮಿಗಳ ಪರಸ್ಪರ ಹಂಬಲ.

ರಾಜಶೇಖರ ಹಾದಿಮನಿ, ಧಾರವಾಡ

ಪಕ್ಕದವರ ಆಸ್ತಿಯಲ್ಲಿ ಮೂಗು ತೂರಿಸುವ ಜಗಳಗಂಟರಿಗೆ ಏನು ಶಾಸ್ತಿ?

ಹತ್ತಿರದ ನ್ಯೂಸ್ ಚಾನಲ್‌ನಲ್ಲಿ ವಿಡಿಯೊ ಸಹಿತ ದಿನವಿಡೀ ಬಿಟ್ಟಿ ಪ್ರಚಾರ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ಗುರುಗಳೆ, ನಮ್ಮ ಜೀವನದ ಒರೆಗಲ್ಲು ಯಾವುದು?

ನಾವು ಸರಿದುಹೋದಾಗ ದುಃಖತಪ್ತವಾಗುವ ಹೃದಯಗಳ ಸಂಖ್ಯೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಸಾಯಲು ಹೋದವನಿಗೆ ಸುನಾಮಿ ಎದುರಾದರೆ?

'ಸದ್ಯ! ಅಷ್ಟು ದೂರ ನಡೆಯುವುದು ತಪ್ಪಿತು' ಎಂದುಕೊಳ್ಳುತ್ತಾನೆ.

ಎ.ಎಸ್. ಸ್ವಾಮಿ, ಶೋರಾಪುರ

ಕವಿಗಳಿಗೂ, ಭಾವನೆಗಳಿಗೂ ಎಂತಹ ಅನುಬಂಧ?

ಮೂಗಿಗೂ ನೆಗಡಿಗೂ ಇರುವಂತಹದ್ದು.

ಕೆ.ವಿ. ಗೋವಿಂದಾಚಾರಿ, ಮೈಸೂರು

ವಿದ್ಯೆಯಿಂದ ವಿನಯ; ಯೋಗದಿಂದ ರೋಗ ವಿಮುಕ್ತಿ. ಜೈಲು ಶಿಕ್ಷೆಯಿಂದ?

ರಾಜಕಾರಣದಲ್ಲಿ ಎರಡು ಹಂತದ ಬಡ್ತಿ.

ಶ್ರುತಿ ರಿಗ್ರೆಟ್ ಐಯ್ಯರ್, ಅಮೆರಿಕ

ಪರಂಗಿಗಳು ನಮ್ಮ ಜನಕ್ಕೆ ಬಿಟ್ಟು ಹೋದದ್ದೇನು?

ಸಿಪ್ಪೆ.

## ಬಹುಮಾನಿತ ಪ್ರಶ್ನೆ

ಚಂದ್ರಕುಮಾರ್ ಡಿ., ಬೆಂಗಳೂರು

ಇತ್ತೀಚೆಗೆ ಸೆರೆಮನೆಗಳೇ ಅರಮನೆಗಳಾಗಿ ಪರಿವರ್ತನೆ ಆಗುತ್ತಿರುವುದು ಯಾವುದರ ಸಂಕೇತ?

ಖದೀಮರೆಲ್ಲ ರಾಜರಾಗುತ್ತಿದ್ದಾರೆ ಎಂಬುದರ ಸಂಕೇತ.

ಭಾರತೀ ಗಂಗಾಧರ್, ಬೆಂಗಳೂರು

ಈಗ 'ಕಾರು ಇಲ್ಲದ ಮನೆಯಿಂದ ಸಾಸಿವೆ ತೊಗೊಂಡು ಬಾ' ಎನ್ನಬಹುದಾ?

ಊಹೂಂ. ಸಾಸಿವೆಯೂ ಇಲ್ಲದ ಮನೆಯಿಂದ ಕಾರು ತೊಗೊಂಡು ಬಾ ಎನ್ನುವುದು ಸೂಕ್ತ.

ಎಸ್.ಸಿ. ರಮೇಶ್, ಮೈಸೂರು

ಕೆಲವು ರಾಜಕಾರಣಿಗಳು ಭಾಷಣ ಮಾಡುವಾಗ ಎಡಕ್ಕೆ, ಬಲಕ್ಕೆ ತಿರುಗಿ ನೋಡುತ್ತಾರೆ. ಏಕೆ?

ಕೊಳೆತ ಮೊಟ್ಟೆ, ಟೊಮೇಟೊ, ಪಾದರಕ್ಷೆಗಳು ಯಾವ ದಿಕ್ಕಿನಿಂದ ಬಂದಾವೋ ಎಂದು.

ಜಗದೀಶ ಬಿ. ಹೊಸೂರು, ಮೈಸೂರು

ಇತ್ತೀಚೆಗೆ ಪುರುಷರು ಗಡ್ಡಪ್ರಿಯರಾಗಲು ಕಾರಣವೇನು?



ಗಡ್ಡದ ಋಷಿಗಳಿಗೆ ಒಲಿದ ರಂಭೆ, ಮೇನಕೆಯರ ನಿರೀಕ್ಷೆಯಂತೆ.

ದಿನೇಶ್, ಗುಡ್ಡದೂರು

ಕೆಎಸ್‌ಆರ್‌ಟಿಸಿ ಬಸ್ಸುಗಳ ಹಿಂದುಗಡೆ ಚಪ್ಪಲಿ, ಶೂಗಳ ಜಾಹೀರಾತು ಹಾಕಲು ಕಾರಣ?

ಬಸ್ಸು ಹತ್ತುವ ರಶ್ನಲ್ಲಿ ಹೆಚ್ಚು ಕಿತ್ತುಹೋಗುವುದು ಅವೇ.

ವಸುಧಾ ಜೈಶಂಕರ್, ಬೆಂಗಳೂರು

ಗತದ ನೆನಪುಗಳು ಜೇನುಗೂಡಿಗೆ ಕೈಹಾಕಿದಂತೆ; ಜೇನ ಸವಿಗಿಂತ ಜೇನಿನ ಕಡಿತವೇ ಹೆಚ್ಚು. ಏನಂತೀರಿ?

ಜೇನುಹುಟ್ಟನ್ನು ತೆಗೆಯುವ ಕ್ರಮ ಅರಿತರೆ ಸವಿಯನ್ನಷ್ಟೇ ಆಯಬಹುದು.

■ ರಾಮ್